ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 5/1/21

## ಪರಿಷತ್ ಗಲ್ಲಾಟೆ; ಸಮಾಲೋಚನಾ ಸಭೆ

**ಬೆಂಗಳೂರು:** ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಆತ್ಮಾವಲೋಕನ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಮಾಲೋಚನೆ ಸಭೆ ನಡೆಸಲು ನಿರ್ಧರಿಸಿದ್ದು ಮುಂಬರುವ ಜಂಟಿ ಅಧಿವೇಶನದ ದಿನಾಂಕದ ಸ್ಪಷ್ಟತೆ ಆಧಾರದಲ್ಲಿ ಸಮಾಲೋಚನಾ ಸಭೆಯ ದಿನಾಂಕ ನಿಗದಿ ಮಾಡಲಿದ್ದೇವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು. ಉಪಸಭಾಪತಿಯವರ ಸಾವು ಎಲ್ಲರಿಗೂ ನೋವು ಹಾಗೂ ಆಘಾತ ತಂದಿದೆ ಎಂದರು.

➘ ವಿವರ: 7

# ಪರಿಷತ್ತಿನಲ್ಲಿ ಗಲಾಟೆ; ಸಮಾಲೋಚನಾ ಸಭೆ

**ಬೆಂಗಳೂರು:** ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಆತ್ಮಾವಲೋಕನ ಮಾಡಿಕೊಳ್ಳುವ ನಿಟ್ಟಿನಲ್ಲಿ ಸಮಾಲೋಚನೆ ಸಭೆ ನಡೆಸಲು ನಿರ್ಧರಿಸಿದ್ದು ಮುಂಬರುವ ಜಂಟಿ ಅಧಿವೇಶನದ ದಿನಾಂಕದ ಸ್ಪಷ್ಟತೆ ಆಧಾರದಲ್ಲಿ ಸಮಾಲೋಚನಾ ಸಭೆಯ ದಿನಾಂಕ ನಿಗದಿ ಮಾಡಲಿದ್ದೇವೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.



ವಿಧಾನಸೌಧದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಉಪಸಭಾಪತಿಯವರ ಸಾವು ಎಲ್ಲರಿಗೂ ನೋವು ಹಾಗೂ ಆಘಾತ ತಂದಿದೆ. ಪರಿಷತ್ತಿನ ಉಪಸಭಾಪತಿಯಾಗಿ ಉತ್ತಮ ಕಾರ್ಯ ನಿರ್ವಹಣೆ ಮಾಡುತ್ತಿದ್ದರು. ವಿಧಾನಮಂಡಲಕ್ಕೆ ದೊಡ್ಡ ಪರಂಪರೆ, ಇತಿಹಾಸವಿದೆ. ಡಿ.15ರಂದು ವಿಧಾನ ಪರಿಷತ್ತಿನಲ್ಲಿ ನಡೆದ ಘಟನೆ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ತಲ್ಲಣ ಗೊಳಿಸಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಇದು ಅನಿರೀಕ್ಷಿತ ಘಟನೆ ಎಂಬುದು ಮೇಲ್ನೋಟಕ್ಕೆ ತಿಳಿದು ಬರುತ್ತದೆ. ಸಭಾಪತಿ ಬರದಂತೆ ತಡೆದಿದ್ದು, ಉಪಸಭಾಪತಿಗಳನ್ನು ಕೂರಿಸಿದ್ದು ಬಳಿಕ ಅವರನ್ನು ಎಳೆದು ಕೆಳಗೆ ಇಳಿಸಿದ್ದು ಅವತ್ತಿನ ನೂಕಾಟ, ತಲ್ಲಾಟವನ್ನು ನಾಡಿನ ಜನ ನೋಡಿದ್ದಾರೆ. ಇದು ರಾಜ್ಯದ ಜನರನ್ನು ದೇಶ ಮಟ್ಟದಲ್ಲಿ ತಲೆ ತಗ್ಗಿಸುವಂತೆ ಮಾಡಿದೆ. ಈ ಘಟನೆಗೆ ಲೋಕಸಭೆ ಸ್ಪೀಕರ್ ಸೇರಿ ಗಣ್ಯರು ಬೇಸರ ವ್ಯಕ್ತಪಡಿಸಿದ್ದರು. ವಿಧಾನಮಂಡಲದ ಜವಾಬ್ದಾರಿಯುತ ವ್ಯಕ್ತಿಯಾಗಿ ಈ ಸಂಸದೀಯ ವ್ಯವಸ್ಥೆಯನ್ನು ವಿಶ್ವಾಸಪೂರ್ಣವಾಗಿ ನಡೆಸುವ ಅಗತ್ಯ ಇದೆ. ಮೌಲ್ಯವನ್ನು ಕುಸಿಯುವ ಈ ಸಂದರ್ಭ ನೋಡುವಂತಾಗಿದೆ. ಹೀಗಾಗಿ ಆತ್ಮಾವಲೋಕನದ ಅಗತ್ಯ ಇದೆ. ಈ ಬಗ್ಗೆ ಹಿರಿಯರ ಜತೆ ಸಮಾಲೋಚನೆ ನಡೆಸಲು ನಿರ್ಧರಿಸಿದ್ದೇನೆಂದು ಹೇಳಿದರು.

ಮೌಲ್ಯನೆಯ ಅಗತ್ಯತೆಯ ಬಗ್ಗೆಯೂ ಚರ್ಚೆ ನಡೆಯುತ್ತಿದೆ. ಹೀಗಾಗಿ ಜನರ ವಿಶ್ವಾಸಕ್ಕೆ ತಕ್ಕಂತೆ ವ್ಯವಸ್ಥೆ ರೂಪಿಸುವ ಅಗತ್ಯವಿದೆ. ಹೀಗಾಗಿ ಸಭಾಧ್ಯಕ್ಷರ ಅಧ್ಯಕ್ಷತೆಯಲ್ಲೇ ಆತ್ಮವಲೋಕನ ಸಭೆ ನಡೆಸಲಿದ್ದೇವೆ. ಸಂವಿಧಾನ ತಜ್ಞರು, ಮಾಜಿ ಸಭಾಪತಿ, ಮಾಜಿ ಸಭಾಧ್ಯಕ್ಷರು ಸೇರಿ ಹಲವರು ಭಾಗವಹಿಸಲಿದ್ದಾರೆ.

ಸಂಸದೀಯ ವ್ಯವಸ್ಥೆಯ ಘನತೆ ಕಾಪಾಡುವುದರ ಜತೆಗೆ ಅದನ್ನು ಮೌಲ್ಯಮಾಪನ ಮಾಡುವ, ವ್ಯವಸ್ಥೆಯಲ್ಲಿ ಸುಧಾರಣೆ ತರುವ, ಮೌಲ್ಯಗಳನ್ನು ಹೇಗೆ ಎತ್ತಿ ಹಿಡಿಯ ಬಹುದೆಂಬ ಬಗ್ಗೆ ವಿಸ್ತೃತ ಸಮಾಲೋಚನೆ ಮಾಡಲಿದ್ದೇವೆ ಎಂದರು.

## ತನಿಖೆಗೆ ಸದನ ಸಮಿತಿ ರಚಿಸಿ ಆದೇಶ

**ಬೆಂಗಳೂರು:** ಡಿ.15 ರಂದು ವಿಧಾನ ಪರಿಷತ್‌ನಲ್ಲಿ ನಡೆದ ಗಲಾಟೆ ಸಂಬಂಧ ತನಿಖೆ ನಡೆಸಲು ಸದನ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ.

ಸಭಾಪತಿ ಕೆ.ಪ್ರತಾಪ ಚಂದ್ರ ಶೆಟ್ಟಿ ಸೂಚನೆ ಮೇರೆಗೆ ವಿಧಾನ ಪರಿಷತ್ ಕಾರ್ಯದರ್ಶಿ ಕೆ.ಆರ್. ಮಹಾಲಕ್ಷ್ಮಿ ಆದೇಶ ಹೊರಡಿಸಿದ್ದಾರೆ. ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಅಧ್ಯಕ್ಷತೆಯಲ್ಲಿ ಸದನ ಸಮಿತಿ ರಚಿಸಲಾಗಿದ್ದು, ಈ ಸಮಿತಿಯಲ್ಲಿ ಪರಿಷತ್ ಕಾಂಗ್ರೆಸ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಆರ್.ಬಿ. ತಿಮ್ಮಾಪುರ, ಬಿಜೆಪಿಯ ಎಚ್. ವಿಶ್ವನಾಥ್ ಹಾಗೂ ಎಸ್.ವಿ. ಸಂಕನೂರ ಸದಸ್ಯರಾಗಿದ್ದಾರೆ.

ಈ ಸದನ ಸಮಿತಿ ಡಿ.15ರಂದು ವಿಧಾನ ಪರಿಷತ್ ಸಭಾಂಗಣದಲ್ಲಿ ನಡೆದ ಅಹಿತಕರ ಘಟನೆ ಸಂಬಂಧ ನಿಯಮ ಹಾಗೂ ಕಾನೂನುಬಾಹಿರ ವರ್ತನೆಯ ಅಂಶಗಳ ಬಗ್ಗೆ ಪರಿಶೀಲಿಸುವುದರ ಜೊತೆಗೆ ಘಟನೆಗೆ ಕಾರಣಕರ್ತರಾದ ಪರಿಷತ್ ಸಚಿವಾಲಯದ ಅಧಿಕಾರಿ, ಸಿಬ್ಬಂದಿಗಳು, ಭದ್ರತಾ ಸಿಬ್ಬಂದಿಗಳು, ಸದನದ ಸದಸ್ಯರು, ಸಚಿವರು ಹಾಗೂ ಇತರರ ವಿರುದ್ಧ ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲಿದೆ. ವರದಿ ನೀಡಲು 20 ದಿನಗಳ ಕಾಲಾವಕಾಶ ನೀಡಲಾಗಿದೆ.

**■ ಮರಿತಿಬ್ಬೇಗೌಡ ಅಧ್ಯಕ್ಷತೆ: 20 ದಿನದಲ್ಲಿ ವರದಿ ನೀಡಲು ಸೂಚನೆ**

ಆದೇಶದಲ್ಲಿ ಪರಿಷತ್ ಅಧಿವೇಶನದಲ್ಲಿ ಡಿ.15ರಂದು ಸದನದಲ್ಲಿ ಉಪ ಸಭಾಪತಿಯವರು ಕೋರಂ ಬೆಲ್ ಚಾಲನೆಯಲ್ಲಿರುವಾಗಲೇ ನಿಯಮಬಾಹಿರವಾಗಿ ಸಭಾಪತಿಯವರ ಪೀಠವನ್ನು ಅಲಂಕರಿಸಿದ್ದು ಸೇರಿ ಆನಂತರದ ಬೆಳವಣಿಗೆಗಳಲ್ಲಿ ಸರ್ಕಾರ ಹಾಗೂ ವಿರೋಧ ಪಕ್ಷದ ಹಲವು ನಾಯಕರು ನಡೆದುಕೊಂಡ ರೀತಿಯಿಂದ ಪೀಠ ಮತ್ತು ಈ ಸದನದ ಗೌರವ, ಘನತೆ ಮತ್ತು ಸಂಪ್ರದಾಯಕ್ಕೆ ಚ್ಯುತಿ ಉಂಟಾಗಿರುವುದರ ಕುರಿತು ಮಾಧ್ಯಮಗಳಲ್ಲಿಯೂ ವರದಿಯಾಗಿದೆ.

ಕಾಂಗ್ರೆಸ್ ಮತ್ತು ಬಿಜೆಪಿ ಶಾಸಕರಿಂದ ಸಹ ಲಿಖಿತ ದೂರು ಮತ್ತು ಪ್ರತಿ ದೂರುಗಳು ಬಂದಿವೆ. ಈ ಹಿನ್ನೆಲೆ ಅಂದು ನಡೆದ ಅಹಿತಕರ ಘಟನೆಗೆ ಕಾರಣಕರ್ತರಾದ ಸದನದ ಸದಸ್ಯರು, ವಿಧಾನ ಪರಿಷತ್ತಿನ ಅಧಿಕಾರಿ, ಸಿಬ್ಬಂದಿಗಳು, ಸಚಿವರು ಮತ್ತು ಇತರರ ಮೇಲೆ ಸೂಕ್ತ ಕ್ರಮ ಕೈಗೊಂಡು ಸದನದ ಹಾಗೂ ಪೀಠದ ಗೌರವವನ್ನು ಎತ್ತಿ ಹಿಡಿಯಬೇಕೆಂದು ಮನವಿ ಮಾಡಲಾಗಿದೆ.